ಬೆಳೆದುಬಂದ ಹಳ್ಳಿಯ ವಾತಾವರಣಕ್ಕೆ ತದ್ವಿರುದ್ಧವಾಗಿರುವ ಜೀವನದ ಓಟ, ಅದಕ್ಕೆ ತಕ್ಕಂತೆ ಸದಾ ಸಿಗುವ ಯಾವುದಾದರೊಂದು ಸಂಚಾರೀ ವ್ಯವಸ್ಥೆ, ಆಕೆಯನ್ನು ಮಹಾನಗರದ ಮಡಿಲೊಳಗೆ ಸ್ಥಾಯಿಯಾಗಿಸಿಬಿಟ್ಟಿತ್ತು.

ಬಂದ ಹೊಸದರಲ್ಲಿ ಬಿಟ್ಟ ಕಣ್ಣು, ಬಾಯಿಯಿಂದ ಅಂಗಡಿಗಳಿಂದ ಮೊದಲುಗೊಂಡು, ಅಡ್ಡಾಡುವ ಅಂಗನೆಯರ ಅಂಗುಷ್ಟದವರೆಗೂ ಅವಲೋಕಿಸುತ್ತಿದ್ದವಳು, ತಾನೂ ಜನಜಾತ್ರೆಯಲ್ಲಿ ಜೂಜಿಗಿಟ್ಟ ಜಾನುವಾರಿನಂತಾದ ಮೇಲೆ ಬಸ್ಸಿನ ಕಿಟಕಿ ಹೊಸತೇನೂ ತೋರಿಸುತ್ತಿಲ್ಲ ಎನಿಸುತ್ತಿತ್ತು. ಬಸ್ಸಿನಲ್ಲಿ ತೂಕಡಿಸುತ್ತಲೋ, ಮೊಬೈಲಿನಲ್ಲಿ ಫೇಸ್‌ಬುಕ್ಕಿಸುತ್ತಲೋ, ಇಲ್ಲ ಮ್ಯಗಜಿನ್ ಮೇಲೇನಾದರೂ ಕಣ್ಣಾಡಿಸುತ್ತಲೋ ಕುಳಿತುಕೊಳ್ಳುವಳು. ಇಂದು ಮೊಬೈಲಿನ ಚಾರ್ಜ್ ಬೇರೆ ಖಾಲಿಯಾಗಿತ್ತು. ತಡವಾಯಿತೆಂದು ಓಡಿ ಬರುವ ಗಡಿಬಿಡಿಯಲ್ಲಿ ಅವಳು ದಾರಿಖರ್ಚಿನ ಪುಸ್ತಕಗಳನ್ನೂ ಬಿಟ್ಟುಬಂದುದರಿಂದಾಗಿ, ಅನಿವಾರ್ಯವಾಗಿ ಬಹುದಿನಗಳ ನಂತರ ಹೊರನೋಡುತ್ತ ಕುಳಿತಳು. ನ್ಯೂಬರಿ ಸ್ಟ್ರೀಟಿನ ಅವೇ ಡಿಸೈನರವೆರ್ ಅಂಗಡಿಗಳು, ಚಿತ್ರವಿಚಿತ್ರ ಹೇರ್ ಸ್ಟೈಲಿನ ಹುಡುಗಿಯರು, ಉದ್ದಜೀನ್ಸಿನವರಾದಿಯಾಗಿ, ಅಂಡು ಮಾತ್ರ ಮುಚ್ಚಿದ್ದರೆ ಹೆಚ್ಚೆನ್ನುವಂತ ಗಿಡ್ಡ ಚಡ್ಡಿಯವರೆಗಿನವರ ಸರಿದಾಡುವ ತೊಗಲುಗಾಲುಗಳ ನಡುವೆ ಹೌದೋ ಅಲ್ಲವೋ ಎಂಬಂತೆ ಕಂಡಿತ್ತು ಹಸ್ತಾಕ್ಷರಗಳಲ್ಲಿ ಬರೆದು ಫುಟ್‌ಪಾತಿನ ಮೇಲೆ ನಿಲ್ಲಿಸಿದ್ದ ಆ ಬಿಳಿಬೋರ್ಡು 'ವೀ ಸೆಲ್ ಡ್ರೀಮ್ಸ್ ಹಿಯರ್'. ಮತ್ತೊಮ್ಮೆ ನೋಡಿದಳು. ಅದೇನೂ ಯಾವುದೇ ಕಾರ್ ಡೀಲರ್ ಅಥವಾ ರಿಯಲ್ ಎಸ್ಟೇಟಿನವರ ಜಾಹೀರಾತಿನಂತೆ ತೋರಲಿಲ್ಲ. ಸಾಮಾನ್ಯವಾಗಿ **'your dream car is waiting for you', 'get the keys to your dream house'** ಎಂಬೆಲ್ಲ ಬಿಲ್ ಬೋರ್ಡುಗಳ ತರ ಇರಲಿಲ್ಲ ಇದು. ಅಷ್ಟರಲ್ಲಾಗಲೇ ಬಸ್ಸು ಮುಂದೆ ಸಾಗಿ ಆ ಬೋರ್ಡಿದ್ದ ಜಾಗ ಮರೆಯಾಗಿ ಕುತೂಹಲ ಮಾತ್ರ ಮರವಾಗತೊಡಗಿತ್ತು. ಅಪಾರ್ಟ್‌ಮೆಂಟ್ ಕಾಂಪ್ಲೆಕ್ಸಿನ ಬಾಗಿಲು ತೆಗೆದು, ಎಲಿವೇಟರ್ ಗುಂಡಿ ಒತ್ತಿ ತಾನಿರುವ 8ನೆ ಅಂತಸ್ತಿನ ಅಂಕೆಯ ಗುಂಡಿ ಒತ್ತಿ ಹೊರಬಂದು ಮನೆ ಬಾಗಿಲು ತೆರೆದರೆ ನೆನಪಾಗಿದ್ದು, ಅಯ್ಯೋ ಟೀ ಪುಡಿ ಮುಗಿದು ಹೋಗಿದೆ. ಅವಳ ದಿನನಿತ್ಯದ ರೂಢಿ ಅದು. ಅದ್ದಿ ತೆಗೆವ ಟೀ ಬ್ಯಾಗೆಲ್ಲ ಏನಿದ್ದರೂ ಆಫೀಸಿನಲ್ಲಿ. ಸಂಜೆ ಮನೆಗೆ ಬಂದ ಮೇಲೆ, ಸಂಗೀತದ ಹಿನ್ನೆಲೆಯಲ್ಲಿ ಚೂರು ಶುಂಟಿ ಜಜ್ಜಿ ಇಲ್ಲವೇ ಲವಂಗ ಮೆಣಸಿನಕಾಳು ಜಜ್ಜಿ, ಚಾಪುಡಿಯೊಂದಿಗೆ ಕುದಿಸಿ ಬಸಿದು ಹಾಲು ಸಕ್ಕರೆ ಬೆರೆಸಿ ಬಾಲ್ಕನಿಯಲ್ಲಿ ನಿಂತು ಕುಡಿದರೇನೆ ನಿರಾಳ. ಬೆಳಗಿಂದ ಮೆದುಳ ಸುತ್ತ ನಿಧಾನಕ್ಕೆ ಸುತ್ತಿ ಸುತ್ತಿ ಬಿಗಿದುಕೊಂಡಿದ್ದ ನರಗಳೆಲ್ಲ ಸಡಿಲವಾದಂತ ಅನುಭವ. ಆ ಬಸ್ಸು ತಪ್ಪಿದ್ದರಿಂದ, ಇನ್ನೊಂದು ಬಸ್ಸು ಹಿಡಿಯುವ ಅವಸರದಲ್ಲಿ ಮಾರ್ಗಮಧ್ಯೆ ಸಿಗುತ್ತಿದ್ದ ಚೈನೀಸ್ ಸ್ಟೋರ್ ನೆನಪಾಗಲೇ ಇಲ್ಲ, ಇಲ್ಲಾಂದರೆ ಟೀ ಪುಡಿ ತರಬಹುದಿತ್ತು ಅದನ್ನು ಹಾದು ಬರುವಾಗಲೇ. ಆ ಯೋಚನೆಯ ಹಿಂದೆಯೇ ಹರಿದು ಬಂತು ಕಣ್ ಪರದೆಯ ಮೇಲೆ ಮತ್ತೆ ಆ ಬೋರ್ಡು: 'ಇಲ್ಲಿ ಕನಸುಗಳು ಮಾರಾಟಕ್ಕೆ ಸಿಗುತ್ತವೆ'.

ಮರುದಿವಸ ಕೆಲಸ ಮುಗಿಸಿದವಳು, ಬೇಕೆಂತಲೇ ತನ್ನ ಯಾವತ್ತಿನ ಬಸ್ ಹತ್ತದೆ, ನಿನ್ನೆ ಹತ್ತಿದ ಬಸ್ಸನ್ನೇ ಹತ್ತಿ ನ್ಯೂಬರಿ ಸ್ಟ್ರೀಟ್ ಮುಗಿದು ಪಕ್ಕದ ರಸ್ತೆಯಲ್ಲಿ ಬಸ್ಸು ಹೊರಳುವುದನ್ನೇ ಉದ್ವೇಗದಿಂದ ಕಾಯುತ್ತ ಕೂತಳು. ಫ್ರೀಡಂ ಸ್ಟ್ರೀಟಿನ ಆದಿಯಲ್ಲಿ ಕಂಡಿತ್ತು ಮತ್ತೆ ಆ ಬೋರ್ಡು. ಮುಂದಿನ ಸ್ಟಾಪಿನಲ್ಲಿ ಗಬಕ್ಕನೆ ಬಸ್ ಇಳಿದು, ಯಾವುದೊ ಕಾದಂಬರಿಯ ನಿಗೂಢ ರಹಸ್ಯದ ಹಾದಿಯಲ್ಲಿ ಸಾಗುವವಳಂತೆ ರಸ್ತೆಗುಂಟ ಬೋರ್ಡು ಕಂಡ ದಿಕ್ಕಿನಲ್ಲಿ ಹಿಂತಿರುಗಿ ನಡೆಯತೊಡಗಿದಳು.